ಸ್ಮರಣೆ

**ಬಿ.ಆರ್. ಪಂತುಲ ಅವರ ಪ್ರಯೋಗಶೀಲ ಚಿತ್ರಗಳಲ್ಲಿ 'ಮಕ್ಕಳ ರಾಜ್ಯ'ವೂ ಒಂದು. ಅರವತ್ತು ವರ್ಷಗಳ ಹಿಂದಿನ ಈ ಚಿತ್ರ, ಕನ್ನಡದ ಮೊದಲ ಮಕ್ಕಳ ಸಿನಿಮಾ.**

■ ಸುರೇಶ್ ಡಿ.ಎನ್.




'ಮಕ್ಕಳ ರಾಜ್ಯ' ಚಿತ್ರದಲ್ಲಿ ಅತಿಥಿ ನಟನಾಗಿ ನಟಿಸಿರುವ ತಮಿಳಿನ ಶಿವಾಜಿ ಗಣೇಶನ್ ಅವರಿಗೆ ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ ಅವರಿಂದ ಸ್ಮರಣಿಕೆ. ಚಿತ್ರದ ನಿರ್ಮಾತೃ ಬಿ.ಆರ್. ಪಂತುಲು ವೇದಿಕೆಯಲ್ಲಿದ್ದಾರೆ.

# ಪಂತುಲು ಮಾಸ್ತರರ ಮಕ್ಕಳ ರಾಜ್ಯಕ್ಕೆ 60



'ಮಕ್ಕಳ ರಾಜ್ಯ'ದಲ್ಲಿ ಬಾಲನಟ ಉಮೇಶ್

ಮಳೆ ಬಂದಾಗಲೆಲ್ಲಾ ಹಳೆಯ ನೆನಪಾಗುತ್ತದಂತೆ. ಈ ಬಾರಿ ಮಳೆಗಾಲದಲ್ಲಿ ಜೊತೆಯಾದುದು, ಪಿ. ಸುಶೀಲಾ ಅವರು ಹಾಡಿದ 'ಮಳೆಯೇ ಸುರಿದು ಬಾ' ಗೀತೆ. ನಾನು 14 ವರ್ಷದವನಿದ್ದಾಗ ಬೆಂಗಳೂರಿನ ಕೆಂಪೇಗೌಡ ರಸ್ತೆಯಲ್ಲಿದ್ದ 'ಗೀತಾ' ಟಾಕೀಸಿನಲ್ಲಿ ನೋಡಿದ 'ಮಕ್ಕಳ ರಾಜ್ಯ' ಸಿನಿಮಾದ ಹಾಡಿದು. ಬಹುಶಃ ಕನ್ನಡದ ಮೊದಲ ಮಕ್ಕಳ ಚಿತ್ರ 'ಮಕ್ಕಳ ರಾಜ್ಯ'ವೇ ಇರಬೇಕು. ಕನ್ನಡ ಸಿನಿಮಾಗಳಲ್ಲಿನ ಮೊದಲ ಮಳೆಹಾಡು 'ಮಳೆಯೇ ಸುರಿದು ಬಾ' ಗೀತೆಯೇ ಇರಬೇಕು.

ಬಿ.ಆರ್. ಪಂತುಲು ಅವರ 'ಪದ್ಮಿನಿ ಪಿಕ್ಚರ್ಸ್' ಮತ್ತು ಎಂ.ವಿ. ರಾಜಮ್ಮನವರ 'ಎಂ.ವಿ.ಆರ್. ಪ್ರೊಡಕ್ಷನ್ಸ್'ಗಳ ನಿರ್ಮಾಣದ ಈ ಚಿತ್ರದಲ್ಲಿ ಪಂತುಲು ಮತ್ತು ರಾಜಮ್ಮ ಅವರೊಂದಿಗೆ ಡಿಕ್ಕಿ ಮಾಧವರಾವ್, ನರಸಿಂಹರಾಜು, ಬಾಲಕೃಷ್ಣ, ಎಂ.ಎನ್. ಲಕ್ಷ್ಮೀದೇವಿ, ಹನುಮಂತಾಚಾರ್, ಸಿ.ವಿ. ಶಿವಶಂಕರ್, ಮುಂತಾದವರು ನಟಿಸಿದ್ದರು. ದಾದಾಮಿರಾಸಿಯವರ ಕಥೆ–ಚಿತ್ರಕಥೆಗೆ ಚಿ. ಸದಾಶಿವಯ್ಯ ಮತ್ತು ಕಣಗಾಲ್ ಪ್ರಭಾಕರ ಶಾಸ್ತ್ರಿಗಳ ಸಾಹಿತ್ಯ. ಸಂಗೀತ ಟಿ.ಜಿ. ಲಿಂಗಪ್ಪನವರದು.

ಕನ್ನಡ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ತೆರೆಕಂಡ ಈ ಚಿತ್ರದ ನಾಯಕ ನಟ ನನ್ನ ಬಾಲ್ಯದ ಗೆಳೆಯ ಎಂ.ಎಸ್. ಉಮೇಶ್. ಆತನನ್ನು ಎಂ.ಸಿ. ಮಹದೇವಸ್ವಾಮಿಯವರ 'ಕನ್ನಡ ಥಿಯೇಟರ್ಸ್' ನಾಟಕ ಕಂಪನಿಯಿಂದ ಹೆಕ್ಕಿ, ಪಂತುಲುರವರ ಮುಂದೆ ನಿಲ್ಲಿಸಿ, ಕ್ಯಾಮರಾ ಎದುರಿಸುವ ಅವಕಾಶ ಕಲ್ಪಿಸಿದವರು, ಆಗ ಪಂತುಲುರವರ ಬಳಿ ಸಹಾಯಕ ನಿರ್ದೇಶಕರಾಗಿದ್ದ ಪುಟ್ಟಣ್ಣ ಕಣಗಾಲ್.

'ಮಕ್ಕಳ ರಾಜ್ಯ' ಚಿತ್ರದ ತಮಿಳು ಆವೃತ್ತಿಗಾಗಿ ಮೊದಲು ಕ್ಯಾಮರಾ ಎದುರಿಸಿದ ನಟ ನಾಗೇಶ್, ಮುಂದೆ ತಮಿಳು ಚಿತ್ರರಂಗದ ಆಲ್‌ಟೈಮ್ ಗ್ರೇಟ್ ಕಮೆಡಿಯನ್ ಆಗಿ ಬೆಳಗಿದರು.

ಇದೇ ಚಿತ್ರದಲ್ಲಿ ಚಂದ್ರಲೋಕದಲ್ಲಿ ನಡೆಯುವ ಕಥಾಭಾಗವನ್ನು (ಎರಡು ಹಾಡುಗಳೂ ಸೇರಿದಂತೆ) ಗೇವಾಕಲರ್‌ನಲ್ಲಿ ಚಿತ್ರಿಸಲಾಗಿದ್ದು ತಮಿಳು ಚಿತ್ರರಂಗದ ಮೇರುನಟ ಶಿವಾಜಿಗಣೇಶನ್ ಚಂದ್ರಲೋಕ ಯಾನಕ್ಕಾಗಿ ಅಂತರಿಕ್ಷ ಆವಿಷ್ಕರಿಸುವ ವಿಜ್ಞಾನಿಯ ಪಾತ್ರದಲ್ಲಿ ಗೌರವನಟರಾಗಿ ನಟಿಸಿದ್ದರು. ಸ್ವಭಾವತಃ ಸ್ಕೂಲ್ ಮಾಸ್ತರೇ ಆಗಿದ್ದ ಪಂತುಲು, ಮಕ್ಕಳಿಗೆ ಈ ಚಿತ್ರದುದ್ದಕ್ಕೂ ಮನರಂಜನೆ ಒದಗಿಸುತ್ತಲೇ ಕಥಾನಕದ ಮೂಲಕವೇ ಸಾಮಾನ್ಯ ಜ್ಞಾನ ಹೆಚ್ಚಿಸುವ ಕೆಲಸ ಮಾಡಿದ್ದಾರೆ. ಉದಾಹರಣೆಗೆ: ಭೂಮಿಯ ಮತ್ತು ಚಂದ್ರನ ಗುರುತ್ವಾಕರ್ಷಣೆ ಶಕ್ತಿ ಹೇಗೆ ಭಿನ್ನ ಎಂಬುದನ್ನು ರಂಜನೀಯವಾಗಿ ಹೇಳುತ್ತಾರೆ. ಹಿಂದಿನ ಕಾಲದಲ್ಲಿ ಐವತ್ತಾರು ದೇಶಗಳಿದ್ದವೆಂದು ನಂಬಲಾಗುತ್ತಿತ್ತು. ಚಿತ್ರದ ಆರಂಭದಲ್ಲಿ ದೊರೆಯ ದರ್ಬಾರಿನಲ್ಲಿ ನಿರೂಪಕ ಪ್ರತಿಯೊಂದು ದೇಶದ ಹೆಸರು ಹೇಳುತ್ತಿದ್ದಂತೆ, ಆಯಾ ದೇಶದ ವಿಶಿಷ್ಟ ಉಡುಗೆ ಧರಿಸಿದ ನರ್ತಕಿಯರು ದೊರೆಯ ಮುಂದೆ ನರ್ತಿಸುತ್ತಾ ನಮಸ್ಕರಿಸಿ ನಿರ್ಗಮಿಸುತ್ತಾರೆ. ನೋಡುಗರಿಗೆ ಛಪ್ಪನ್ನೈವತ್ತಾರು ದೇಶಗಳ ಹೆಸರುಗಳೂ ತಿಳಿಯುತ್ತದೆ. ಚಿತ್ರದುದ್ದಕ್ಕೂ ಪ್ರಜೆಗಳೇ ಪ್ರಭುಗಳು ಎಂಬ ವಿಚಾರ ಬಂದು, ಸಿನಿಮಾದ ಕೊನೆಯಲ್ಲಿ ಪ್ರಜಾರಾಜ್ಯ ಸ್ಥಾಪಿತವಾಗುತ್ತದೆ.

ಆ ಚಿತ್ರದ ನಟನಟಿಯರು ನಿರ್ಮಾಪಕ, ನಿರ್ದೇಶಕ, ತಂತ್ರಜ್ಞರು, ಸಾಹಿತಿಗಳ ಪೈಕಿ ಯಾರೂ ಈಗಿಲ್ಲ. ಅಂದು ಆ ಚಿತ್ರದ ನಾಯಕನಾಗಿ ಅಮೋಘವಾಗಿ ಅಭಿನಯಿಸಿ ಸಿನಿಮಾರಂಗಕ್ಕೆ ಕಾಲಿಟ್ಟ ನನ್ನ ಪ್ರೀತಿಯ ಉಮೇಶ್, ತಮ್ಮ ಅಭಿನಯ ಪ್ರತಿಭೆ, ವಿಶಿಷ್ಟವಾದ ಮಾತಿನಶೈಲಿ, ಅಚ್ಚರಿಗೊಳಿಸುವ ಟೈಮಿಂಗ್ ಮತ್ತು ಬಾಡಿ ಲ್ಯಾಂಗ್ವೇಜ್‌ಗಳಿಂದ ಈಗಲೂ ಸಕ್ರಿಯರಾಗಿದ್ದಾರೆ.

'ಮಕ್ಕಳ ರಾಜ್ಯ' ಚಿತ್ರದಲ್ಲಿ ಒಂದೆರಡು ನಿಮಿಷಗಳ ಪುಟ್ಟ ಪಾತ್ರದಲ್ಲಿ ಕಾಣಿಸಿಕೊಂಡ ಚಿ. ಉದಯಶಂಕರ್, ಮುಂದೆ ಕನ್ನಡ ಚಿತ್ರಗಳ ಅತ್ಯಂತ ಜನಪ್ರಿಯ ಸಾಹಿತಿಯಾಗಿ ಅಮರರಾದರು. ಅವರ ತಂದೆ ಚಿ. ಸದಾಶಿವಯ್ಯನವರು ಈ ಚಿತ್ರಕ್ಕಾಗಿ ಬರೆದ 'ಜಾತಕ ಫಲವೇ ಫಲವಯ್ಯ...' ಎಂಬ ಹಾಡಿನಲ್ಲಿ ಕುದುರೆ ಗಾಡಿ ಹೊಡೆಯುವವನಾಗಿ ಕಾಣಿಸಿಕೊಂಡ ಪುಟ್ಟಣ್ಣ ಕಣಗಾಲ್, ಮುಂದೆ ದೇಶದ ದಿಗ್ಗಜ ನಿರ್ದೇಶಕರಾಗಿ ಕನ್ನಡ ಸಾರೋಟನ್ನು ರಾಜಬೀದಿಗಳಲ್ಲಿ ಮೆರವಣಿಗೆ ಮಾಡಿಸಿದರು.

ಇಂದಿನವರೆಗೆ ಅನೇಕ ಮಕ್ಕಳ ಚಿತ್ರಗಳು ಬಂದಿವೆ. ಆದರೆ ಮೊದಲು ಮಿನುಗಿದ ಧ್ರುವನಕ್ಷತ್ರ ನಿಸ್ಸಂದೇಹವಾಗಿ 'ಮಕ್ಕಳ ರಾಜ್ಯ'. ಅಂದಹಾಗೆ, 1960ರಲ್ಲಿ ತೆರೆಕಂಡ 'ಮಕ್ಕಳ ರಾಜ್ಯ' ಈ ವರ್ಷ ಅರವತ್ತು ವರ್ಷ ಪೂರೈಸಿದೆ. ಷಷ್ಟ್ಯಬ್ದಿಯ ಈ ಸಿನಿಮಾ ಇಂದಿನ ಮಕ್ಕಳಿಗೂ ನೋಡಲು ದೊರೆಯುವಂತಾದರೆ ಚಂದ. ■